ಎನ್. ಜಗನ್ನಾಥ ಪ್ರಕಾಶ್

# ಅಪ್ರತಿಮ ಕಲಾವಿದೆ ಲಲಿತಾ



ಚಿತ್ರರಂಗದಿಂದ ನಾಟಕ ಜಗತ್ತಿಗೆ ಕಾಲಿಟ್ಟು ಜನಪ್ರಿಯತೆಯ ಉತ್ತುಂಗದಲ್ಲಿರುವಾಗಲೇ ಬಣ್ಣದ ಬದುಕಿನಿಂದ ದೂರ ಸರಿದರೂ ಚಿತ್ರಭೂಮಿ ಹಾಗೂ ರಂಗಭೂಮಿ ಅಪ್ರತಿಮ ಕಲಾವಿದೆಯಾಗಿ ಗುರುತಿಸಿಕೊಂಡವರು ಬಳ್ಳಾರಿ ಲಲಿತಾ.

ಮನೆಯಲ್ಲಿ ಸಂಗೀತ ವಾತಾವರಣ. ತಂದೆ ಪಿಟೀಲು ವಿದ್ವಾಂಸ ತಿಮ್ಮಪ್ಪ ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಕಲಾಶಿಕ್ಷಣ ಕೊಡಿಸುವ ಉತ್ಸಾಹ ತೋರಿದ್ದರ ಪರಿಣಾಮ ಅವರ ಮೂವರು ಹೆಣ್ಣುಮಕ್ಕಳು ಕಲಾಪ್ರಪಂಚಕ್ಕೆ ಕಾಲಿಡುವಂತಾಯಿತು.

ಲಲಿತಾ ಅವರು ಸಂಗೀತ ಹಾಗೂ ಭರತನಾಟ್ಯದಲ್ಲಿ ಹೆಚ್ಚಿನ ಆಸಕ್ತಿ ತೋರಿದರಲ್ಲದೆ ಗಾಯನವನ್ನೂ ಮೈಗೂಡಿಸಿಕೊಂಡರು. ತಮ್ಮ ಸಹೋದರಿಯರಾದ ರತ್ನಮಾಲಾ ಹಾಗೂ ಯಶೋದ ಅವರೊಂದಿಗೆ ಮದ್ರಾಸಿಗೆ ಬಂದ ಲಲಿತಾ ಅವರಿಗೆ ಮೊದಲಿಗೆ ಅವಕಾಶ ಸಿಕ್ಕಿದ್ದು ಚಲನಚಿತ್ರದಲ್ಲಿ.

ತೆಲುಗು ಭಾಷೆಯ 'ಜಯಪ್ರದ' ಬಳ್ಳಾರಿ ಲಲಿತಾ ಅಭಿನಯದ ಮೊದಲ ಚಿತ್ರ. ಈಕೆಯ ಕಲಾಪ್ರತಿಭೆಯನ್ನು ಬಹುಬೇಗ ಗಮನಿಸಿದ ಚಿತ್ರರಂಗ ಪಾತ್ರಗಳಿಗೆ ಆಹ್ವಾನಿಸಲು ತಡಮಾಡಲಿಲ್ಲ. 'ಸುಮತಿ' ಚಿತ್ರದಲ್ಲಿ ಬಳ್ಳಾರಿ ಲಲಿತಾ ಅವರೇ ನಾಯಕಿಯಾದರು. ಈ ಚಿತ್ರದಲ್ಲಿನ ಅಭಿನಯ ಕಲಾಪ್ರೇಮಿಗಳನ್ನು ಸೆಳೆಯಿತು.

ಜೆಮಿನಿ ಸಂಸ್ಥೆಯ 'ಬಾಲನಾಗಮ್ಮ' ಬಳ್ಳಾರಿ ಲಲಿತಾ ಅವರಿಗೆ ಹೆಚ್ಚು ಕೀರ್ತಿ ತಂದ ಇನ್ನೊಂದು ಚಿತ್ರ. ಚಿತ್ರರಂಗದಲ್ಲೇ ನೆಲೆಯೂರಬೇಕೆಂಬ ಉದ್ದೇಶ ಸೋದರಿಯರಿಗೆ ಇತ್ತಾದರೂ ದ್ವಿತೀಯ ಮಹಾಯುದ್ಧದ ಕರಿನೆರಳು ಮದ್ರಾಸ್ ಮೇಲೆ ಬಿದ್ದಿದ್ದರಿಂದ ಇದು ಸಾಧ್ಯವಾಗದೇ ಹೋಯಿತು.

ಆಗ ಮದ್ರಾಸ್‌ನಲ್ಲಿ ಚಿತ್ರರಂಗದ ಸಂಪರ್ಕದಲ್ಲಿದ್ದ ಪ್ರಸಿದ್ಧ ಹಾಸ್ಯಕಲಾವಿದ ಕೆ. ಹಿರಣ್ಣಯ್ಯನವರ ಪರಿಚಯವಾದ ಬಳಿಕ ಬಳ್ಳಾರಿ ಲಲಿತಾ ಹಾಗೂ ಬಳ್ಳಾರಿ ರತ್ನಮಾಲ